

ಪ್ರಾರ್ಥನೆ

ಸೂಕ್ತಿಪ್ರಭ



## ಬ್ರಹ್ಮದೇವನ ಸ್ತುತಿಯಿಂದ

ನೌಮೀಡ್ಯ ತೇಽಭ್ರವಪುಷೇ ತಡಿದಂಬರಾಯ
ಗುಂಜಾವತಂಸಪರಿಪಿಚ್ಛಲಸನ್ಮುಖಾಯ ।
ವನ್ಯಸ್ರಜೇ ಕವಲವೇತ್ರವಿಷಾಣವೇಣು
ಲಕ್ಷ್ಮಶ್ರಿಯೇ ಮೃದುಪದೇ ಪಶುಪಾಂಗಜಾಯ ॥೧॥

ಪೂಜ್ಯನಾದ ನಿನಗೆ ನಮಿಸುವೆ. ಮೃದುವಾದ ಪಾದಗಳುಳ್ಳ, ಮೋಡದ ಬಣ್ಣದ ಶರೀರವುಳ್ಳ, ಮಿಂಚಿನಂತೆ ಕಂಗೊಳಿಸುವ ವಸ್ತ್ರಗಳನ್ನು ಧರಿಸಿರುವ, ಕೆಂಪು ಮಣಿಗಳಿರುವ ಓಲೆಗಳಿಂದ ಶೋಭಿಸುತ್ತಿರುವ ಮುಖವುಳ್ಳ, ನವಿಲಿನ ಗರಿಯನ್ನು ಧರಿಸಿರುವ, ಕಾಡು ಹೂಗಳ ಮಾಲೆಯನ್ನು ಧರಿಸಿರುವ, ಕೋಲು, ಕೊಂಬುಗಳನ್ನು ಸೊಂಟಕ್ಕೆ ಕಟ್ಟಿಕೊಂಡು, ಕೈಯಲ್ಲಿ ಕೊಳಲು ಹಾಗೂ ಅನ್ನದ ಉಂಡೆಯನ್ನು ಹಿಡಿದಿರುವ ನಂದಕುಮಾರನೇ, ನಿನಗೆ ನಮಿಸುವೆ.

(ಭಾಗವತ, ೧೦ನೇ ಸ್ಕಂಧ, ೧೪ನೇ ಅಧ್ಯಾಯ)

ಅಸ್ಯಾಪಿ ದೇವ ವಪುಷೋ ಮದನುಗ್ರಹಸ್ಯ
ಸ್ವೇಚ್ಛಾಮಯಸ್ಯ ನ ತು ಭೂತಮಯಸ್ಯ ಕೋಽಪಿ ।
ನೇಶೇ ಮಹಿ ತ್ವವಸಿತುಂ ಮನಸಾಽಽನ್ತರೇಣ
ಸಾಕ್ಷಾತ್ತವೈವ ಕಿಮುತಾತ್ಮಸುಖಾನುಭೂತೇಃ ॥೨॥

ಹೇ ದೇವ! ನಿನ್ನ ಈ ರೂಪವನ್ನು ತಿಳಿಯಲು ಏಕಾಗ್ರತೆ ಹಾಗೂ ಸ್ಥಿರ ಮನಸ್ಸುಳ್ಳ ಸೃಷ್ಟಿಕರ್ತನಾದ ನನಗೇ ಸಾಧ್ಯವಿಲ್ಲ. ನಿನ್ನ ಈ ದೇಹ ಪಂಚಭೂತಗಳಿಂದ ಉತ್ಪತ್ತಿಯಾಗಿಲ್ಲ. ನನ್ನಂತಹ ಭಕ್ತರನ್ನು ಅನುಗ್ರಹಿಸಬೇಕೆಂದು ನೀನು ಲೀಲೆಯಿಂದ ಈ ರೂಪವನ್ನು ಧರಿಸಿರುವೆ. ನಿನ್ನನ್ನು ಆ ಸಚ್ಚಿದಾನಂದ ಸ್ವರೂಪವಾದ ಪರತತ್ತ್ವವೆಂದು ತಿಳಿಯುವುದಂತೂ ಯಾರಿಗೇ ಆದರೂ ದೂರದ ಮಾತೇ ಸರಿ.

(ಭಾಗವತ, ೧೦ನೇ ಸ್ಕಂಧ, ೧೪ನೇ ಅಧ್ಯಾಯ)

---

## ಸ್ವಾಮಿ ರಾಮಕೃಷ್ಣಾನಂದರ ನುಡಿಗಳು

✷ ಎಲ್ಲಿ ರಹಸ್ಯವಿದೆಯೋ ಅಲ್ಲಿ ಕೊರತೆ ಇದೆ. ರಹಸ್ಯವು ನಮ್ಮನ್ನು ವೈಚಾರಿಕವಾಗಿ ದುರ್ಬಲಗೊಳಿಸುತ್ತದೆ; ಕುರುಡರನ್ನಾಗಿಸುತ್ತದೆ. ವೈಚಾರಿಕವಾಗಿ ವಿವರಿಸಲಾರದ್ದು ಈ ಪ್ರಪಂಚದಲ್ಲಿ ಯಾವುದೂ ಇಲ್ಲ. ಧರ್ಮ, ಅಧ್ಯಾತ್ಮಗಳ ವಿಷಯದಲ್ಲೂ ರಹಸ್ಯ ಆಚರಣೆಗಳಿಂದ ಕೂಡಿರುವಂತಹದ್ದು ಯಾವುದೂ ಇರಕೂಡದು. ದೇವರು ಯಾವುದೇ ಕಾರಣಕ್ಕೂ ರಹಸ್ಯ ವ್ಯಕ್ತಿಯಲ್ಲ. ಅವನು ಹಗಲಿಗಿಂತ ಸ್ಪಷ್ಟ, ಸೂರ್ಯನಂತೆ ಸದಾ ಸ್ಪಷ್ಟ ಹಾಗೂ ಮುಕ್ತ.

✷ ಭಗವಂತ ತಮ್ಮನ್ನು ಪ್ರೀತಿಸಬೇಕೆಂದು ಎಲ್ಲರೂ ಬಯಸುತ್ತಾರೆ. ಏಕೆಂದರೆ, ಈ ಜಗತ್ತಿನಲ್ಲಿ ಒಳಿತು ಹಾಗೂ ಸುಖವನ್ನು ದೇವರಿಂದ ಮಾತ್ರ ಪಡೆಯಲು ಸಾಧ್ಯ. ಆ ದೇವರ ಪ್ರೀತಿ ದಕ್ಕಬೇಕಾದರೆ ವ್ಯಕ್ತಿಯೂ ಕೂಡ ಸ್ವಲ್ಪ ಮಟ್ಟಿಗೆ ಭಗವಂತನಾಗಬೇಕಾಗುತ್ತದೆ. ಇಲ್ಲದಿದ್ದರೆ ದೇವರ ಪ್ರೀತಿಯನ್ನು ಗಳಿಸುವ ಸಾಧ್ಯತೆಯೇ ಇಲ್ಲ. ಅದಕ್ಕೇ ನಮ್ಮ ಶಾಸ್ತ್ರಗಳು ಹೇಳುತ್ತವೆ, **ದೇವೋ ಭೂತ್ವಾ ದೇವಂ ಯಜೇತ್**—'ದೇವರೇ ಆಗಿ ದೇವರನ್ನು ಪೂಜಿಸು'.

✷ **ಗೋಪಿಯರು** ಶ್ರೀಕೃಷ್ಣನನ್ನು ಕಾಮಭಾವದಿಂದ ಎಂದೂ ಪ್ರೀತಿಸಲಿಲ್ಲ. ತಮ್ಮ ಮನೆ, ಮರ್ಯಾದೆ, ಭಯ, ನಾಚಿಕೆ—ಎಲ್ಲ ಪ್ರಾಪಂಚಿಕ ಚಿಂತೆ, ವ್ಯಾಮೋಹಗಳನ್ನು ಬದಿಗೊತ್ತಿ ಅವನಲ್ಲಿ ಸಂಪೂರ್ಣ ಶರಣಾಗಿದ್ದರು. ಇದು ಅತ್ಯಂತ ಉದಾತ್ತವಾದ ಹಾಗೂ ಪವಿತ್ರವಾದ ಅಸಾಮಾನ್ಯವಾದ ಭಕ್ತಿ.

✷ ಶ್ರೀಕೃಷ್ಣನ ಮತ್ತೊಂದು ಹೆಸರು ಹೃಷೀಕೇಶ—ಇಂದ್ರಿಯಗಳನ್ನು ಸಂಪೂರ್ಣವಾಗಿ ಗೆದ್ದಿರುವವನು. ರೂಪ, ಕೀರ್ತಿ, ಯಶಸ್ಸುಗಳನ್ನು ಪಡೆದಿದ್ದರೂ ಸಂಯಮದಿಂದಿರಲು ಅವನಿಗೆ ಮಾತ್ರ ಸಾಧ್ಯವಾಯಿತು. ಅವನೇ ನಿಜವಾದ ಯೋಗಿ—'ಆಪ್ತಕಾಮ, ಆತ್ಮಕಾಮ'—ಪೂರ್ಣನಾದವನು, ಆತ್ಮವನ್ನೇ ಬಯಸುವವನು, ಆತ್ಮತೃಪ್ತನು.

✷ **ಮನಮೋಹಕ ಸೌಂದರ್ಯ**, ಕೊಳಲನ್ನು ನುಡಿಸಿ ಕೇವಲ ಮನುಷ್ಯರನ್ನಲ್ಲ, ಪ್ರಾಣಿಗಳನ್ನೂ ಆಕರ್ಷಿಸುವ ಸಾಮರ್ಥ್ಯ, ಅಸಾಧಾರಣ ಮೇಧಾಶಕ್ತಿ, ಮಾತುಗಾರಿಕೆ, ಶಕ್ತಿ, ಸಾಮರ್ಥ್ಯ ಹಾಗೂ ಬುದ್ಧಿಯ ಬಲದಿಂದ ಯಾರನ್ನೂ ಗೆಲ್ಲಬಲ್ಲ ಚತುರತೆ—ಇಷ್ಟೆಲ್ಲ ಗುಣಗಳು ಒಬ್ಬನೇ ವ್ಯಕ್ತಿಯಲ್ಲಿ ಕಾಣಸಿಗುವುದು ಕೃಷ್ಣನಲ್ಲಿ ಮಾತ್ರ. ಆದರೂ ಅದೆಂತಹ ವಿನಯ, ಸಹನೆ, ದಯೆ, ಪ್ರಶಾಂತತೆಯನ್ನು ಅವನಲ್ಲಿ ಕಾಣುತ್ತೇವೆ! ಯಾರಿಗೆ ತಾನೇ ಕೃಷ್ಣನ ವ್ಯಕ್ತಿತ್ವ ಪ್ರಿಯವಾಗುವುದಿಲ್ಲ? *